ಸ್ಯ 1895–96ನೇ ಇಸವಿ ಮಿ॥ ಅರ್ಜೀ ನಂಬರ್ 331.

ಮೃತಪಟ್ಟ ನರಸಿಂಗ್ ಯಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಮಾಗಡಿ ಕಸಬೆಯಲ್ಲಿ ಇರುವ ಹೀರಾಮಲ್ ಶಿಂಗರ ಮಗ ಭವಾರ್‌ಶಿಂಗ್, ಮೃತಪಟ್ಟ ಸದರೀ ನರಸಿಂಗ್ ಯಂಬುವರಿಗೆ ತಮ್ಮನು ಆಗಬೇಕೆಂಬ ಹಕ್ಕುದಾರಿ ಮೇಲೆ ಮಾಗಡಿ ಸ್ಥಳದ ಭವಾರ್‌ಶಿಂಗ್ ಯಂಬುವರು, ಮಾಗಡಿ ವಾಸಸ್ಥರಾಗಿ ಮೃತಪಟ್ಟ ನರಸಿಂಗ್ ಯಂಬುವರ ಜಿಂದಗಿ ಬಗ್ಯಾಗೆ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬ್ಯಾಗೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತು ದಾರರಾದ ಭವಾರ್‌ಶಿಂಗರ ಅರ್ಜಿಯನ್ನು ಸ್ಯ 1896ನೇ ಇಸವಿ ಜೂನ್ ತಿಂಗಳ ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನರಸಿಂಗ್ ಯಂಬುವರ ಆಸ್ತಿಗೆ ಹಕ್ಕು ದಾರರಾದ ವಿಸಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1896ನೇ ಇಸವಿ ಮಾರ್ಚಿ ತಿಂಗಳ 3ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಿಶಾನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ಯ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 334.

ಬೆಂಗಳೂರ್ ಬಳ್ಳಾಪುರ ಪೇಟೆಯಲ್ಲಿ ಇರುವ 1ನೇ ಭಾರ್ತೂಬೀಬಿ ವುರಫ್ ಬಿಜುಬೀ 6ನೇ ರ್ಪರ್ಷ ಅಮಲ್‌ದಾರ್ ಮಹಮ್ಮದ್ ದಾವೂದ್‌ಖಾನ್‌ಸಾಹೆಬರು, ಮೃತಪಟ್ಟ ಫೆಸ್ಟರ್ ಹಾಜಿ ಸಯ್ಯದ್ ನಸರುರ್ದೀ ಸಾಹೆಬರ ಮೈನರ್ ಮಕ್ಕಳಾದ ಬೆಂಗಳೂರು ಬಳ್ಳಾಪುರ ಪೇಟೇಯಲ್ಲಿ ಇರುವ 2ನೇ ಫಾತಿರ್ಮಾನಿಸಾಬೇಗಮ್ಮ, 3ನೇ ರಹಿರ್ಮಾನಿಸಾಬೇಗಮ್ಮ, 4ನೇ ಸಯ್ಯದ್ ಮಹಮ್ಮದ್ ಅಬ್ದುಲ್‌ಮಜೀದ್, 5ನೇ ಸಯ್ಯದ್ ಮಹಮ್ಮದ್ ಅಬ್ದುಲ್ ಅಜೀಜ್ ಇವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ 2ನೇ ಫಾತಿರ್ಮಾನಿಸಾಬೇಗಮ್ಮ, 3ನೇ ರಹಿರ್ಮಾನಿಸಾಬೇಗಮ್ಮ, 4ನೇ ಸಯ್ಯದ್ ಮಹಮ್ಮದ್‌ಅಬ್ದುಲ್ ಮಜೀದ್, 5ನೇ ಸಯ್ಯದ್ ಮಹಮ್ಮದ್ ಅಬ್ದುಲ್ ಅಜೀಜು ಇವರುಗಳಿಗೆ 1ನೇ ಭಾರ್ತೂಬೀಬಿ ವುರಫ್ ಬಿಜುಬಿ ತಾಯಿಯು 6ನೇ ಮಹಮ್ಮದ್ ದಾವೂದ್‌ಖಾನ್‌ಸಾಹೆಬರು ಮಾವನು ಆಗಬೇಕೆಂಬ ಹಕ್ಕಿನ ಮೇಲೆ ಬೆಂಗಳೂರು ಬಳ್ಳಾಪುರಪೇಟೇಯಲ್ಲಿ ಇರುವ 1ನೇ ಭಾರ್ತೂಬೀಬಿ ವುರಫ್ ಬಿಜುಬಿ 6ನೇ ಮಹಮ್ಮದ್ ದಾವೂದ್‌ಖಾನ್‌ಸಾಹೆಬರು, ಸದರೀ ಮೈನರ್‌ಗಳ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬ್ಯಾಗೆ ಅರ್ಜಿ ಕೊಟ್ಟು ಇರುತ್ತಾರೆ.

ಸದರೀ ಅರ್ಜಿ ಹಿಯರಿಂಗ್ ಬ್ಯಾಗೆ 1896ನೇ ಇಸವಿ ಜೂನ್ ತಾರೀಖು 15ರಲ್ಲು ಮೊಕರರ್ ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

1896ನೇ ಇಸವಿ ಮಾರ್ಚಿ ತಿಂಗಳ 4ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ಯ 1895–96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 362.

ಮೃತಪಟ್ಟ ದೇವಾಂಗದ ಸೊಂಡೇಕುಪ್ಪದ ನರಸಿಹ್ಮಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರು ರಣವೀರಪಟ್ಟಿ ವ್ಯಾಟೆಯಲ್ಲಿ ಯಿರುವ ಭೋಗದ ನರಸಿಹ್ಮಯ್ಯ ಮೈನರು, ಗಾರ್ಡಿಯರ್ 1ನೇ ತಾಯಿ ರಾಮಕ್ಕಾ 2ನೇ ಮಲತಾಯಿ ಮುನಿಯಮ್ಮ ಯಿವರು, ಮೃತಪಟ್ಟ ಸದರೀ ಸೊಂಡೇಕುಪ್ಪದ ನರಸಿಹ್ಮಯ್ಯನವರಿಗೆ 1—2ನೇ ಅರ್ಜಿದಾರ್ರು ಹೆಂಡತಿಯರು ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ರಣವೀರಪಟ್ಟಿ ವ್ಯಾಟೆ ಸ್ಥಳದ ಭೋಗದ ನರಸಿಹ್ಮಯ್ಯ ಮೈನರ್, ಗಾರ್ಡಿಯರ್ 1ನೇ ರಾಮಕ್ಕಾ 2ನೇ ಮುನಿಯಮ್ಮ, ಡಿಪೋ ವ್ಯಾಟೆ ವಾಸಸ್ಥರಾಗಿ ಮೃತಪಟ್ಟ ಸೊಂಡೇಕುಪ್ಪದ ನರಸಿಹ್ಮಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ ಮಾಡುವದಕ್ಕೆ ಸ್ಯ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬ್ಯಾಗೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತು ದಾರರಾದ ಭೋಗದ ನರಸಿಹ್ಮಯ್ಯ ಮೈನರ್, ಗಾರ್ಡಿಯರ್ ಮತ್ತು ತಾಯಿ 1ನೇ ರಾಮಕ್ಕಾ 2ನೇ ಮಲತಾಯಿ ಮುನಿಯಮ್ಮ ಇವರ ಅರ್ಜಿಯನ್ನು ಸ್ಯ 1896ನೇ ಇಸವಿ ಜುಲೈ ತಿಂಗಳ ತಾರೀಖು 4ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೊಂಡೇಕುಪ್ಪದ ನರಸಿಹ್ಮಯ್ಯನವರ ಆಸ್ತಿಗೆ ಹಕ್ಕು ದಾರರಾದ ವಿಸಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1896ನೇ ಇಸವಿ ಮಾರ್ಚಿ ತಿಂಗಳ ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಾನಮ್ಮ ದಸ್ತಖತ್ತೊನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ತುಮಕೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ಇದರಿಂದ ಸಕ್ಕಲಜನಗಳಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟಿನಲ್ಲಿ ಇರೇಬಿನಲ್ಲಿ ನಮೂದಾಗುವ ಸ್ಟೇಪ್‌ಫಾರೆಸ್ಟುಗಳು ವಿನಹ ತುಮಕೂರು, ಮದ್ದಗಿರಿ, ಚಿಕ್ಕನಾಯಿಕನಹಳ್ಳಿ, ಕಿರಾ, ಗುಬ್ಬಿ, ತಿಪಟೂರ್, ಪಾವಗಡ, ಕುಣಿಗಲ್ ಈ ತಾಲ್ಲೂಕುಗಳ ಮತ್ತು ಕೊರಟಗೆರೆ, ಹುಲಿಯೂರ 5, ತುರುವೆಕೆರೆ ಸಬ್ ತಾಲ್ಲೂಕುಗಳಲ್ಲಿರುವ ಡಿಸ್ಟ್ರಿಕ್ಟ್ ಫಾರೆಸ್ಟುಗಳ ಬಾಬತು ಅರಗಿನ ಕಂಟ್ರಾಕ್ಟು, ಫಾರೆಸ್ಟುಗಳ ಬಾಬತು ಅರಗಿನ ಕಂಟ್ರಾಕ್ಟು 1896ನೇ ಇಸವಿ ಜುಲೈ ಗುರ್ತೇ ಲಾಗಾಯತು 1897ನೇ ಜೂನ್ ಆಖೈರವರಿಗೆ ಒಂದು ವರುಷ ಅಂದರೆ 1896—97ನೇ ಸಾಲಿಗೆ ಜಡದರಖಾಸ್ತುದಾರ್ರಿಗೆ 1896ನೇ ಇಸವಿ ಜೂನ್ ತಾರೀಖು 1ರಲ್ಲು ಮಧ್ಯಾನ್ಹ 12 ಘಂಟೆಗೆ ತುಮಕೂರು ಡಿಸ್ಟ್ರಿಕ್ಟು ಆಫೀಸಿನಲ್ಲಿ ಡೆಪ್ಯೂಟಿ ಕಮ್ಮಿಷನರ್ ಅಥವಾ ಅವರಿಂದ ನೇಮಿಸಲ್ಪಡುವ ಅಸಿಸ್ಟೆಂಟ್ ಕಮ್ಮಿಷನರ್ ರೂಬರೂ ವಿಕ್ರಯಿಸಲ್ಪಡುವದು.

1. ದೇವರಾಯದುರ್ಗ
2. ಮದ್ದಗಿರಿ
3. ಕೋಳಿಕಲ್
4. ಬುಕ್ಕಾಪಟ್ಟಣ
5. ಮಂಚಲದೊರೆ
6. ಹುಲಿಯೂರದುರ್ಗ
7. ಕಂಪಲಾಪುರ
8. ಕಾವೇರಿಕಣಿವೆ
9. ತೀರ್ಥರಾಂಪುರ

II. ಚಡ ದರಖಾಸ್ತುದಾರರು ತಮ್ಮ ದರಖಾಸ್ತು ಮಂಜೂರಾದ ನಂತರ ಮಂಜೂರಾದ ಕಂಟ್ರಾಕ್ಟು ವಟ್ಟು ಮೊಬಲಗಿನ ಸಾಲ್ತು ತಿಂಗಳ ಖಿಸ್ತು ಗಳಿಗೆ ಸಮನಾದ ಮೊಬಲಗು ನಗದಾಗಲಿ ಅಥವಾ ಕರೆನ್ಸಿ ನೋಟಾಗಲಿ ಹಾಜರ್ಮಾಡತಕ್ಕದ್ದು, ಹಾಗೆ ಮಾಡಲಿಕ್ಕೆ ತಪ್ಪಿದ ಪಕ್ಷ ಸದರೀ ಕಂಟ್ರಾಕ್ಟು ಕೂಡ್ಲೆ ಪುನಹ ಹರಾಜು ಹಾಕಲ್ಪಟ್ಟು ಆ ಮೂಲಕ ಸರ್ಕಾರಕ್ಕೆ ಉಂಟಾಗುವ ಲುಕ್ಸಾನಿಗೆ ಅವರನ್ನು ಗುರಿಮಾಡಲಾದೀತು.

III. ಮಂಜೂರಾದ ದರಖಾಸ್ತುದಾರರು 1896ನೇ ಜುಲೈ 1ನೇ ತಾರೀಖಿನಲ್ಲಿ ಕಂಟ್ರಾಕ್ಟು ಕೆಲಸದ ಮೇಲೆ ಪ್ರವೇಶಿಸಿ ತಮ್ಮ ಮೊದಲನೆ ಮಾಹೆ ಖಿಸ್ತನ್ನು 1896ನೇ ಇಸವಿ ಆಗಸ್ಟು 15ರಲ್ಲಿ ಆಗಲಿ ತತ್ಪೂರ್ವ ಆಗಲಿ ಪಾವತಿ ಮಾಡತಕ್ಕದ್ದು. ಆ ತರುವಾಯ ಪ್ರತಿ ಮಾಹೆ ಖಿಸ್ತು ಆ ತಿಂಗಳು ಕಳೆದ ಮಾರನೆತಿಂಗಳ 15ನೇ ತಾರೀಖಿನಲ್ಲಿ ಆಗಲಿ ತತ್ಪೂರ್ವ ಆಗಲಿ ಪಾವತಿ ಮಾಡತಕ್ಕದ್ದು ಅಂಥಾ ಮಾಹೆವಾರಿ ಖಿಸ್ತುಗಳು ಡಿಪಾಜಟ್ಟು ಇಟ್ಟು ಮೊಬಲಗ್ಯೇ ಸಂಬಂಧವಿಲ್ಲದೆ ಪ್ರತ್ಯೇಕವಾಗಿ ಪಾವತಿ ಮಾಡತಕ್ಕದ್ದು. ಹಾಗೆ ಪ್ರತಿಮಾಹೆ 15ನೇ ತಾರೀಖಿನ ಒಳಗೇನೇ ಖಿಸ್ತು ಹೊಬಲಗು ಪಾವತಿಮಾಡದೆ ತಪ್ಪಿದಲ್ಲಿ ಆ ಲಾಗಾಯಿತು ಅಂಥಾ ಖಿಸ್ತು ಮೊಬಲಗ್ಯೇ ಸಾಲಿಯಾನಾ ಕೇಕಡಾ 6 ರೂಪಾಯಿನಂತೆ ಬಡ್ಡಿ ದಾಖಲ್ಮಾಡ್ಲಪಡುವದು.

IV. ಕಂಟ್ರಾಕ್ಟುದಾರ್ರು ಕೊಡತಕ್ಕ ಮಾಹೆವಾರಿ ಖಿಸ್ತುಗಳ ಮೇಲೆ ರೂಪಾಯಿ ವಂದಕ್ಕೆ ವಂದಾಣಿ ಮೇರಿಗೆ ಲೋಕಲ್ ಸೆಸ್ಸನ್ನು ಕೊಡಬೇಕು.

V. ಅವಿಚ್ಛಿನ್ನವಾಗಿ (2) ಯರಡು ತಿಂಗಳವರಿವಿಗೂ ಸದರೀ ಖಿಸ್ತು ಕೊಡಲಿಕ್ಕೆ ತಪ್ಪಿದರೂ ಅಥವಾ ಸಾವಕಾಶ ಮಾಡಿದರೂ ಸದರೀ ಕಂಟ್ರಾಕ್ಟು ಪೂರ್ತಿಗಿ ರದ್ದಾಗಲಿಕ್ಕೆ ಗುರಿಯಾಗಿ ಡಿಪಾಜಟ್ಟು ವಟ್ಟು ಮೊಬಲಗನ್ನ ಗಣಿನಿಗೆ ತಾರದೆ ಪರತ್ತಿಗೆ ತಪ್ಪಿದ ಕಂಟ್ರಾಕ್ಟುದಾರನ್ನ ಲುಕ್ಸಾನಿಗೆ ಗುರಿಪಡಿಸಿ ಕಂಟ್ರಾಕ್ಟು ಪುನಹ ವಿಕ್ರಯಿಸಲ್ಪಡುವದು. ಸದರೀ ಡಿಪಾಜಿಟ್ ಮೊಬಲಗು ಗವರ್ಮೆಂಟಿಗೆ ಕೇರಿಸಿಕೊಳ್ಳಲ್ಪಡುವದು ಮತ್ತು ಬಾಕಿ ಮೊಬಲಗು ವಿಷಯದಲ್ಲಿ ರೆವಿನ್ಯೂ ಕಂದಾಯದ ಮೊಬಲಗಿನಂತೆ ವಸೂಲ್ಮಾಡಲ್ಪಡುವದು.

VI. ಕಂಟ್ರಾಕ್ಟುದಾರ್ರು ಯಾವ ಗಿಡಗಳಿಂದ ಅರಗು ತೆಗದುಕೊಂಡು ಹೋಗುರ್ತಾರೋ ಅಂತಾ ಅರಗಿನ ಗಿಡಗಳನ್ನು ಕತ್ತರಿಸುವದಕ್ಕೂ ಸಾಗಿಸುವದಕ್ಕೂ ಯಾ ಅರೂಪ ಪಡಿಸುವದಕ್ಕೂ ಅಧಿಕಾರವನ್ನು ಹೊಂದಿರುವದಿಲ್ಲ.

VII. ಇನಾಂದಾರ್ರುಗಳಿಗೆ ಸ್ಥಿರಪಟ್ಟಿರುವ ಹಕ್ಕಿನ ವಿಷಯದಲ್ಲಿ ಕಂಟ್ರಾಕ್ಟುದಾರ್ರು ಪ್ರವೇಶಿಸಕೂಡದು.

VIII. ಹರಾಜು ಕಾಲದಲ್ಲಿ ಜಾಲಾರೀ ಗಿಡಗಳು ಇರತಕ್ಕ ಬಗರ್ ಹಿಡುವಳಿ ಜಮೀನುಗಳು ಕಂಟ್ರಾಕ್ಟು ಜಾರೀಲಿರುವ ಕಾಲದಲ್ಲಿ ನಾಗುವಳಿಗೆ ತೆಗದುಕೊಂಡ ಪಕ್ಷ ಕಂಟ್ರಾಕ್ಟುದಾರ ತನ್ನ ಕಂಟ್ರಾಕ್ಟು ಆಖೈರಾಗುವ ವರಿಗೂ ಅಂತಾ ಗಿಡಗಳಲ್ಲಿ ಅರಗು ಜಮಾಯಿಸಿಕೊಳ್ಳತಕ್ಕ ಹಕ್ಕು ಪುಳ್ಳವನಾಗಿ ಇರತಕ್ಕದ್ದು.

IX. ಕಾರಣಗಳನ್ನು ತೋರಿಸದೇನೇ ಯಾವ ಸವಾಲನ್ನಾದರೂ ಅಂಗೀಕರಿಸುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಡೆಪ್ಯುಟಿ ಕಮ್ಮಿಷನರವರು ಸ್ವತಂತ್ರರಾಗಿರುತ್ತಾರೆ.

ಎಂ. ನಾರಾಯಣರಾವ್,
ಅಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್.

ಮೈಸೂರ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

1895—96ನೇ ಇಸವಿ ಅರ್ಜೀ ನಂಬರ 390.

ಮೃತಪಟ್ಟ ಪಾರ್ವತೆಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು 1ನೇ ನಾರಾಯಣ 2ನೇ ಗುಂಡಾ ನ್ಯೂನರುಗಳು, ಗಾರ್ಡಿಯರ್ ಜನಕ ತಂದೆ ಶ್ರೀಕಂಠಯ್ಯನವರು, ಮೃತಪಟ್ಟ ಸದರೀ ಪಾರ್ವತೆಮ್ಮನವರಿಗೆ ಮೈನರುಗಳು ಮಮ್ಮಕ್ಕಳು ಆಗಬೇಕೆಂಬ ಹಕ್ಕುದಾರಿ ವೇಲೆ ನಂಜನಗೂಡು ಕಸಬಾ ಸ್ಥಳದ ಸದರೀ ಶ್ರೀಕಂಠಯ್ಯನವರು, ಮೈಸೂರು ಕಿಲ್ಲೇ ವಾಸಸ್ಥರಾಗಿ ಮೃತಪಟ್ಟ ಪಾರ್ವತೆಮ್ಮನವರ ಜೊದಗಿ ಬಗ್ಯಾಗಿ ಬರತಕ್ಕ 800 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೇ ಈ ಕೋರ್ಟಿಗೆ ಖಾಮಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶ್ರೀಕಂಠಯ್ಯನವರ ಅರ್ಜಿಯನ್ನು 1896ನೇ ಇಸವಿ ಜೂನ್ ತಿಂಗಳ ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟು ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಾರ್ವತೆಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಪ್ಟ್ರರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1895—96ನೇ ಇಸವಿ ಅರ್ಜೀ ನಂಬರ 391.

ಮೃತಪಟ್ಟ ನಕ್ಕೇದಂಗಡಿ ಮಹಮ್ಮದ್ ಖಾಸಿಂಸಾಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು 1ನೇ ಜೈನಾಬಿ 2ನೇ ಅಷಬಿ ಮೈನರ್‌ಗಳು, ಗಾರ್ಡಿಯರ್ ಇವರ ಗಂಡ ಅಮ್ಮದ್‌ಸಾಬಿಯು ಮೃತಪಟ್ಟ ಸದರೀ ಮಹಮ್ಮದ್‌ಖಾಸಿಂಸಾಬರಿಗೆ 1ನೇಯವಳು ಅಕ್ಕ ಆಗಬೇಕೆಂಬ ಹಕ್ಕುದಾರಿ ವೇಲೆ ಹುಣಸೂರು ಸ್ಥಳದ ಸದರೀ ಅಮೀರ್‌ಸಾಬೀರು, ಸದರೀ ವಾಸಸ್ಥರಾಗಿ ಮೃತಪಟ್ಟ ಮಹಮ್ಮದ್ ಖಾಸಿಂಸಾಬರ ಜೊದಗೆ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೇ ಈ ಕೋರ್ಟಿಗೆ ಖಾಮಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅಮೀರ್‌ಸಾಬರ ಅರ್ಜಿಯನ್ನು 1896ನೇ ಇಸವಿ ಜೂನ್ ತಿಂಗಳ ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟು ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಹಮ್ಮದ್‌ಖಾಸಿಂಸಾಬರ ಆಸ್ತಿಗೆ ಹಕ್ಕುದಾರರಾದ ವಿಸಪ್ಟ್ರರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.